ದಿನಾಂಕಃ 07.03.2026 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ-

ಆರ್.ಎ.14/2018 ರಲ್ಲಿಯ ಆದೇಶ ಪುಟದ ನಕಲನ್ನು ನಿಪಿ-1 ಎಂದು, ಸ್ಕ್ಯಾನಿಂಗ್ ರಿಪೋರ್ಟ್ ಅನ್ನು ನಿಪಿ-2 ಎಂದು, ಹೊರ ರೋಗಿಗಳ ಫೈಲ್ ಅನ್ನು ನಿಪಿ-3 ಎಂದು, ಜಯದೇವ ಆಸ್ಪತ್ರೆಯ ಬಿಡುಗಡೆ ಪತ್ರವನ್ನು ನಿಪಿ-4 ಎಂದು, ಮೆಡಿಕಲ್ ರಿಪೋರ್ಟ್‌ಗಳನ್ನು ನಿಪಿ-5 ರಿಂದ 12 ಎಂದು, ಹೊರ ರೋಗಿಯ ದಾಖಲೆಯನ್ನು ನಿಪಿ-13 ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಎದುರುದಾರರ ಪರ ವಕೀಲರಿಂದಃ

ಆರ್.ಎ.14/2018 ನ್ನು ಹಾಕಿದ ನಂತರದಲ್ಲಿ ನಾನಾಗಲೀ ನಮ್ಮ ವಕೀಲರಾಗಲೀ ಅರ್ಜಿಯಲ್ಲಿ ಹಾಜರು ಆಗಿರಲಿಲ್ಲ ಎಂದರೆ ಸರಿ. ಆ ಪ್ರಕರಣದಲ್ಲಿ ನಮಗೆ ಯಾವುದೇ ದಾಖಲೆಗಳನ್ನು ಹಾಕಲು ಇರಲಿಲ್ಲ ಎಂದರೆ ಸರಿ, ಎಲ್ಲಾ ದಾಖಲೆಗಳನ್ನು ಮೂಲ ದಾವೆಯಲ್ಲಿಯೇ ಹಾಕಿದ್ದೆವು ಎಂದರೆ ಸರಿ. ನಾನು ಮೂಲ ದಾವೆ ನಡೆಯಬೇಕಾದರೆ ಅಥವಾ ಅಪೀಲು ಪ್ರಕರಣದ ನಡೆಯುತ್ತಿರಬೇಕಾದರೆ ಯಾವುದೇ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲು ಆಗಿರಲಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರಿದು ನನಗೆ ಖಾಯಿಲೆ ಇತ್ತು ಎಂದು ಹೇಳುತ್ತಾರೆ. ನಾನು ಈ ದಿನ ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲೆಗಳು 2014 ನೇ ಸಾಲಿನ ದಾಖಲೆಗಳು ಎಂದರೆ ಸರಿ. ಅದರಲ್ಲಿ ಕೆಲವು ದಾಖಲೆಗಳು 2011 ಮತ್ತು 2015 ನೇ ಸಾಲಿನವು ಕೂಡ ಇವೆ ಎಂದರೆ ಸರಿ. ನಾನು ಪ್ರಕರಣಗಳು ಚಾಲ್ತಿಯಲ್ಲಿದ್ದಾಗ ಅಥವಾ ಅದಕ್ಕಿಂತ ಸ್ವಲ್ಪ ಮುಂಚೆ ಯಾವುದೇ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲು ಆಗಿರಲಿಲ್ಲ ಎಂದರೆ ಸರಿ. ನನಗೂ ಮತ್ತು ನನ್ನ ವಕೀಲರಿಗೂ ನ್ಯಾಯಾಲಯಕ್ಕೆ ಬರಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನನ್ನ ಪ್ರಕರಣದಲ್ಲಿ ಯಾವುದೇ ತಿರುಳು ಇಲ್ಲದ ಕಾರಣ ಕೇವಲ ಎದುರುದಾರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**ಸಹಿ/-**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.